ಕೋನಗಳಲ್ಲಿ ಪರೀಕ್ಷೆ ಮಾಡುತ್ತಿದ್ದುದನ್ನು ನಾನು ಗಮನಿಸಿದೆ. ಮೇಜಿನ ಮೇಲೆ ಅನೇಕ ಸಲಕರಣೆಗಳಿದ್ದವು... ಭೂತಗನ್ನಡಿ, ಬಗೆ ಬಗೆಯ ದ್ರಾವಣಗಳು, ಇನ್ನೂ ಏನೇನೋ. ಅದೊಂದು ಪ್ರಯೋಗಾಲಯವೇ ಅನ್ನಬಹುದು. ಸಮಯವಿದ್ದಾಗ ಕೆಲವೊಮ್ಮೆ ಆತ ಯಾವುದಾದರೂ ರಾಸಾಯನಿಕ ಮಿಶ್ರಣಗಳ ಪ್ರಯೋಗದಲ್ಲಿ ನಿರತನಾಗಿರುವುದೂ ಉಂಟು.

ಮಧ್ಯಾಹ್ನ ಊಟದ ನಂತರ ಆತ ಎರಡು ಕವರುಗಳನ್ನು ಕಿಸೆಯಲ್ಲಿ ತುರುಕಿ ಹೊರಟು ಹೋದ. ಸಂಪಂಗಿಯ ಪ್ರಕರಣದಲ್ಲಿ ಆತ ಸಂಪೂರ್ಣ ತಲ್ಲೀನನಾಗಿದ್ದ ಎನ್ನುವುದರಲ್ಲಿ ಸಂಶಯವಿರಲಿಲ್ಲ. ಯಾವುದೇ ಪ್ರಕರಣವು ಒಂದು ತಾರ್ಕಿಕ ಹಂತ ತಲಪುವವರೆಗೆ ಆತ ಹೆಚ್ಚಾಗಿ ಅದನ್ನು ಚರ್ಚಿಸುತ್ತಿರಲಿಲ್ಲ. ಆದ್ದರಿಂದ ನಾನು ಆತನನ್ನು ಪ್ರಶ್ನಿಸಲು ಯತ್ನಿಸಲಿಲ್ಲ. ರಾತ್ರಿ ನಾನು ಮಲಗುವ ತನಕವೂ ಆತ ಹಿಂದಿರುಗಿರಲಿಲ್ಲ.

ಮರುದಿನ ಬೆಳಿಗ್ಗೆ ಉಪಹಾರದ ಸಮಯದಲ್ಲಿ ಮೆಲ್ಲನೆ ಸಂಪಂಗಿಯ ಪ್ರಕರಣವನ್ನು ಎತ್ತಿದೆ.

"ಆ ಮೂರನೆಯ ಲಕೋಟೆಯನ್ನು ನೀನು ತಂದಿದ್ದು ಸರಿಯೇ? ಒಂದೊಮ್ಮೆ ಅದು ಸಂಪಂಗಿಗೆ ಗೊತ್ತಾದರೆ ತೊಂದರೆಯಾಗಲಿಕ್ಕಿಲ್ಲವೇ? ಆ ನಿಗೂಢ ಸಂದೇಶದ ಉದ್ದೇಶವಾದರೂ ಏನು?"

"ಬಿದ್ದಪ್ಪ, ಆ ಪ್ರಶ್ನೆಗಳಿಗೆಲ್ಲಾ ಇಷ್ಟು ಬೇಗ ಉತ್ತರ ನಿರೀಕ್ಷಿಸಬೇಡ. ಆದರೂ ನಾವು ಕೆಲವು ಊಹೆಗಳನ್ನು ಸುಲಭವಾಗಿ ಮಾಡಬಹುದು. ನಿನಗೇನಾದ್ರೂ ಹೊಳಿತೀದೆಯಾ?"

"ಸಂಪಂಗಿ ಯಾರಿಂದಲೋ ಅಪಾಯವಿದೆಯೆಂದು ಅಡಗಿಕೊಳ್ಳುತ್ತಿದ್ದಾನೆ ಎಂದು ಸುಲಭವಾಗಿ ಊಹಿಸಬಹುದು. ಆತ ಹೆಚ್ಚಾಗಿ ಹೊರಬರದೇ ಇರುವುದು, ಮನೆಯ ಬೀಗ ಬದಲಾಯಿಸಿದ್ದು, ಊಟವನ್ನು ಕಿಟಕಿಯ ಮೂಲಕ ತೆಗೆದುಕೊಳ್ಳುವುದು, ಮಾಡಿನ ಮೂಲಕ ಮನೆಯೊಳಗೆ ಹೋಗಿದ್ದು ಎಲ್ಲವೂ ಅದನ್ನು ಸಮರ್ಥಿಸುತ್ತವೆ. ನನ್ನ ಊಹೆ ಸರಿ ತಾನೆ?"

"ನೂರಕ್ಕೆ ನೂರು ಸರಿ. ನಮಗೆ ಬಾಕಿ ಇರುವುದು ಆತನಿಗೆ ಯಾರಿಂದ, ಯಾಕೆ ಅಪಾಯ ಅಂತ ಕಂಡು ಹಿಡಿಯುವುದು ಮಾತ್ರ. ಈ ಬಗ್ಗೆ ನಿನ್ನದೇನಾದರೂ ಕಲ್ಪನೆಗಳಿವೆಯೆ?"

"ಮುತ್ತಪ್ಪನಿಗೆ ಸಂಪಂಗಿಯ ಪರಿಚಯವಿದೆ. ಅವರ ನಡುವೆ ಯಾವುದೋ ಹಣಕಾಸು ವ್ಯವಹಾರವೂ ಇದೆ. ಮುತ್ತಪ್ಪನಿಗೆ ಹೊನ್ನರಾಜು ಕೂಡಾ ಅಂಜುತ್ತಾನೆ. ಸಂಪಂಗಿಗೆ ಲಕೋಟೆ ತಂದಿದ್ದು ಮುತ್ತಪ್ಪನೇ! ಬಹುಶಃ ಅದನ್ನು ಸೃಷ್ಟಿಸಿದ್ದು ಅವನೇ! ಸಂಪಂಗಿಗೆ ಬಾಡಿಗೆಗೆ ಮನೆ ನೀಡುವಂತೆ ಮಾಡಿದ್ದೂ ಅವನೇ! ಇವೆಲ್ಲವೂ ಮುತ್ತಪ್ಪನ ಪಾತ್ರದತ್ತ ಬೊಟ್ಟು ಮಾಡುತ್ತವೆ. ನಿನ್ಗೆ ಇನ್ನೊಂದು ವಿಷ್ಯ ಗೊತ್ತಾ? ಹಿಂದಿನ ದಿನ ರಾತ್ರಿ ಮುತ್ತಪ್ಪ ಟಾರ್ಚ್ ಹಿಡಿದು, ಸಂಪಂಗಿಯ ಮನೆಯತ್ತ ಹೋಗ್ತಿದ್ದನಂತೆ. ಬೊಳ್ಳಮ್ಮ ಇದನ್ನ ಹೇಳುವಾಗ ನೀನು ಹೊರಗೆ ಹೋಗಿದ್ದೆ..."

"ಅದನ್ನು ಖಚಿತಪಡಿಸಲೇ ನಾನು ಹೊರಗೆ ಹೋಗಿದ್ದು! ನಾವು ಮಾತಾಡುತ್ತಿರುವಾಗ, ಹೊರಗಡೆ ಮುತ್ತಪ್ಪ ಬಂದಿದ್ದು ಕಂಡಿತು. ಆತ ಚಪ್ಪಲಿ ತೆಗೆದಿರಿಸಿ, ಒಳಗೆಲ್ಲೋ ಹೋದ. ನಾನು ತಕ್ಷಣ ಓಡಿಹೋಗಿ ಆತನ ಚಪ್ಪಲಿಯ ಅಳತೆ ತೆಗೆದುಕೊಂಡೆ. ಅದು ಸಂಪಂಗಿಯ ಮನೆಯೊಳಗೆ ಸಿಕ್ಕಿದ ಹೆಜ್ಜೆ ಗುರುತಿಗೆ ಸರಿಯಾಗಿ ತಾಳೆಯಾಗುತ್ತೆ! ಅವ್ನು ಸಂಪಂಗಿಯ ಮನೆಯಲ್ಲಿ ಹಣ ಹುಡುಕೋಕೆ ಹೋಗಿದ್ದ!"

"ಮುತ್ತಪ್ಪ ಸಂಪಂಗಿಯನ್ನು ಬೆದರಿಸಲು ಆ ವಿಚಿತ್ರ ಬರಹಗಳ ಪತ್ರ ಸೃಷ್ಟಿಸಿದ್ದಾನೆ. ಭಯದಿಂದ ಸಂಪಂಗಿ ಜಾಗ ಖಾಲಿ ಮಾಡಲಿ ಅನ್ನೋದಷ್ಟೇ ಅದ್ರ ಉದ್ದೇಶ ಅನಿಸುತ್ತೆ. ಸಂಪಂಗಿಗೆ ಯಾವುದೋ ಅಪರಾಧದ ಹಿನ್ನೆಲೆ ಇರಬಹುದು. ಅದಕ್ಕೇ ಆತ ಯಾವಾಗಲೂ